ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ಹಿರಿಯೂರು

ಸಿ.ಸಿ ನಂಃ **157/2024**

ಪಿರ್ಯಾದಿಃ ಹಿರಿಯೂರು ಗ್ರಾಮಾಂತರ ಪೋಲಿಸ್ ಠಾಣೆ

ವಿರುದ್ಧ

ಆರೋಪಿತರುಃ 1. ಪುನೀತ
ತಂದೆ ತಿಪ್ಪೇಸ್ವಾಮಿ, 20 ವರ್ಷ

2. ಕೃಷ್ಣಮೂರ್ತಿ ಯಾನೆ ಕಾರ್ತಿಕ್
ತಂದೆ ಉಮೇಶ್, 19 ವರ್ಷ

ಇಬ್ಬರ ವಾಸಃ ಹುಲಗಲಗುಂಟೆ ಗ್ರಾಮ,
ಹಿರಿಯೂರು ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ

ದೋಷಾರೋಪಣೆ

ನಾನು ಶ್ರೀಮತಿ. ಸುಜಾತ ಸುವರ್ಣ.ಬಿ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಹಿರಿಯೂರು, ಈ ಮೂಲಕ ನಿಮ್ಮನ್ನು ದೋಷಾರೋಪಣೆಗೆ ಗುರಿಪಡಿಸುವುದೇನೆಂದರೆ

ದಿನಾಂಕ 31.12.2023 ರಂದು ಸಂಜೆ 4 ಗಂಟೆಯಿಂದ ದಿನಾಂಕ 01.01.2024 ರಂದು ಬೆಳಿಗ್ಗೆ 10 ಗಂಟೆಯ ಮಧ್ಯದ ಅವಧಿಯಲ್ಲಿ ಆರೋಪಿತರಾದ ನೀವುಗಳು ಹಿರಿಯೂರು ತಾಲ್ಲೂಕು ಹುಲಗಲಕುಂಟೆ ಗ್ರಾಮದಲ್ಲಿರುವ ಚಾಸಾ.1 ರವರ ಬಾಬ್ತು ರಿ.ಸ.ನಂ.29/1 ರ ಜಮೀನಿನಲ್ಲಿರುವ ತೆಂಗಿನ ಗರಿಯ ಗುಡಿಸಲಿಗೆ ಹಿಂಬದಿಯ ತೆಂಗಿನ ಗರಿಗಳನ್ನು ಕಿತ್ತು ರಾತ್ರಿಯಲ್ಲಿ ಹೊಂಚುಹಾಕಿ ಕನ್ನ ಹಾಕುವ ಉದ್ದೇಶದಿಂದ ಅತಿಕ್ರಮ ಪ್ರವೇಶ ಮಾಡಿದ್ದು ಆ ಮೂಲಕ ಆರೋಪಿಗಳಾದ ನೀವುಗಳು ಭಾ ದಂ ಸಂ ಕಲಂ 454 ರಡಿಯಲ್ಲಿ ದಂಡಿಸಲ್ಪಡುವ ಅಪರಾದ ಎಸಗಿದ್ದೀರೆಂದು ಆರೋಪಿಸಲಾಗಿದೆ.

2. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಅಪರಾಧವೆಸಗುವ ಸಮಾನೋದ್ದೇಶದಿಂದ ಬಂದಿದ್ದು ಚಾಸಾ.1 ರವರು ವಾಸ ಮಾಡುವ ಮನೆಯೊಳಗೆ ತೆಂಗಿನ ಗರಿಗಳನ್ನು ಕಿತ್ತು ಒಳಗೆ ಅಕ್ರಮವಾಗಿ ಪ್ರವೇಶ ಮಾಡಿದ್ದು ಆ ಮೂಲಕ ಆರೋಪಿಗಳಾದ ನೀವುಗಳು ಭಾ ದಂ ಸಂ ಕಲಂ 457 ರಡಿಯಲ್ಲಿ ದಂಡಿಸಲ್ಪಡುವ ಅಪರಾದ ಎಸಗಿದ್ದೀರೆಂದು ಆರೋಪಿಸಲಾಗಿದೆ.

3. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು

ಅಪರಾಧವೆಸಗುವ ಸಮಾನೋದ್ದೇಶದಿಂದ ಬಂದಿದ್ದು ಚಾಸಾ.1 ರವರ ಜಮೀನಿನಲ್ಲಿರುವ ತೆಂಗಿನ ಗರಿಯನ್ನು ತೆಗೆದುಹಾಕಿ ಅಕ್ರಮವಾಗಿ ಪ್ರವೇಶ ಮಾಡಿ ಸುಮಾರು ರೂ.23,000/– ಬೆಲೆಬಾಳುವ 20 ಅಡಿ ಉದ್ದದ 5 ಕಬ್ಬಿಣದ ಪೈಪ್ ಗಳನ್ನು ಮತ್ತು ಸುಮಾರು 42 ಮೀಟರ್ ಉದ್ದದ ಕೇಬಲ್ ಗಳನ್ನು ಕಳ್ಳತನ ಮಾಡಿದ್ದು ಆ ಮೂಲಕ ಆರೋಪಿಗಳಾದ ನೀವುಗಳು ಭಾ ದಂ ಸಂ ಕಲಂ 380 ರಡಿಯಲ್ಲಿ ದಂಡಿಸಲ್ಪಡುವ ಅಪರಾದ ಎಸಗಿದ್ದೀರೆಂದು ಆರೋಪಿಸಲಾಗಿದೆ .

( ಮೇಲ್ಕಂಡ ಆರೋಪದ ಮೇಲೆ ಆರೋಪಿತರಾದ ನೀವುಗಳು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಿರುತ್ತೀರೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ .)

ದಿನಾಂಕಃ **03.09.2024**
ಸ್ಥಳಃ ಹಿರಿಯೂರು

(ಸುಜಾತ ಸುವರ್ಣ. ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಹಿರಿಯೂರು.